ಪಿ.ಡಬ್ಲ್ಯೂಃ 01.

ದಿನಾಂಕಃ 23-11-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ

ನಾನು ದಾವೆ ಸಲ್ಲಿಸುವ ಸಮಯದಲ್ಲಿ ನಮ್ಮ ವಕೀಲರಿಗೆ ದಾವೆಗೆ ಸಂಬಂಧಿಸಿದಂತೆ ಮೂಲ ಕ್ರಯ ಪತ್ರ , ದಾನ ಪತ್ರ , ಎಂ ಆರ್, ಆರ್ ಟಿ ಸಿ ಗಳನ್ನು ಕೊಟ್ಟಿರುತ್ತೇನೆ. ದಾವಾ ಸ್ವತ್ತಿಗೆ ಚೆಕ್ಕುಬಂದಿ ತೋರಿಸಿದ್ದು , ಅದಕ್ಕೆ ದಾಖಲೆ ಇದೆ. ಸದರಿ ದಾಖಲೆಗಳೆಂದರೆ ನಕಾಶೆ ಇದೆ. ದಾವಾ ಸ್ವತ್ತುಗಳ ಸದರಿ ನಕಾಶೆಯಲ್ಲಿ ಇವೆ. ಚೆಕ್ಕುಬಂದಿಯು ಸಹ ನಕಾಶೆಯಲ್ಲಿ ಇದೆ. ಸದರಿ ನಕ್ಷೆಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. 2015 ರಲ್ಲಿ ನಕ್ಷೆಯನ್ನು ಸರ್ಕಾರಿ ಸರ್ವೇಯರ್ ತಯಾರಿಸಿದ್ದಾರೆ. ನಕ್ಷೆಯನ್ನು ತಯಾರಿಸುವ ಪೂರ್ವದಲ್ಲಿ ಸರ್ವೇಯರ್ ನೋಟೀಸನ್ನು ಯಜಮಾನ ರಾಮೇಗೌಡ , ಮರದೂರು ಬೋರೇಗೌಡ , ಗೋವಿಂದನಾಯಕರವರಿಗೆ ನೀಡಿರುತ್ತಾರೆ. ಮೇಲೆ ಹೇಳಿದ ಮೂರು ಜನರು ನನ್ನೊಂದಿಗೆ ಚೆನ್ನಾಗಿದ್ದಾರೆ. ದಾವಾ ಜಮೀನಿನ ಸುತ್ತಮುತ್ತಲೂ ಅವರು ಇದ್ದಾರೆ. ದಾವಾ ಜಮೀನಿನ ಪಶ್ಚಿಮ ದಿಕ್ಕಿಗೆ ಯಜಮಾನ ರಾಮೇಗೌಡ ಇದ್ದಾರೆ. ಅದರ ಸ.ನಂಃ 9/1 ಇದೆ. ಅದು ಎರಡು ಅಥವಾ ಮೂರು ಎಕರೆ ಜಮೀನು ಇದೆ. ಸದರಿಯವರು ಬಂದು ನನ್ನ ಪರವಾಗಿ ಸಾಕ್ಷ್ಯ ನುಡಿಯಲು ತೊಂದರೆ ಇಲ್ಲಾ. ಸ.ನಂಃ 9/1 ರ ಎರಡು ಅಥವಾ ಮೂರು ಎಕರೆ ಜಮೀನಿನ ಚೆಕ್ಕುಬಂದಿಯನ್ನು ಮೂರು ದಿಕ್ಕಿಗೆ ಹೇಳಬಲ್ಲೆ ಮತ್ತೊಂದು ದಿಕ್ಕಿಗೆ ಹೇಳಲಾಗುವುದಿಲ್ಲ ಎಂದಿದ್ದಾರೆ. ಮರದೂರು ಬೋರೆಗೌಡರವರು ದಾವಾ ಜಮೀನಿನ ದಕ್ಷಿಣ ಭಾಗಕ್ಕೆ ಬರುತ್ತಾರೆ. ಅವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲಾ. ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲಾ. ಸದರಿಯವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲಾ. ದಾವಾ ಜಮೀನಿನ ಪೂರ್ವಕ್ಕೆ ಗೋವಿಂದನಾಯಕರವರು ಬರುತ್ತಾರೆ. ಅವರ ಜಮೀನಿನ ಸ.ನಂಃ 10/4. ಅವರ ಜಮೀನು 20 ಗುಂಟೆ ಇದೆ. ಗೋವಿಂದನಾಯಕರವರನ್ನು ಹೊರೆತುಪಡಿಸಿ ಪೂರ್ವ ದಿಕ್ಕಿಗೆ ಬೇರೆ ಯಾರು ಬರುವುದಿಲ್ಲ.

ದಾವಾ ಜಮೀನಿನ ಪೂರ್ವಕ್ಕೆ ಇರುವ ಸ.ನಂಃ10/4 ರ ಮೂಲ ಸ.ನಂಃ10 ಒಟ್ಟು ವಿಸ್ತೀರ್ಣ 4 ಎಕರೆ 31 ಗುಂಟೆ. ಸ.ನಂಃ 10 ಪೋಡಾಗಿ ನಮ್ಮ ತಾಯಿಗೆ 1 ಎಕರೆ 15 ವರೆ ಗುಂಟೆ , ಗೋವಿಂದನಾಯಕನಿಗೆ 2 ಎಕರೆ, ಸೋಮಯ್ಯನಿಗೆ 15 ಗುಂಟೆ ಬಂದಿದ್ದು ಅದರ ಪೈಕಿ ಮಂಜುನಾಂಥರವರಿಗೆ ಕೊಟ್ಟಿದ್ದಾರೆ. ಭಾಗ್ಯಮ್ಮ ಮತ್ತು ಗೌರಮ್ಮ ರವರಿಗೆ 19 ಗುಂಟೆ ಬಂದಿದೆ. ಸ,ನಂಃ 10 ಮೂಲತಃ ಪೋಡಾಗುವ ಪೂರ್ವದಲ್ಲಿ 4 ಎಕರೆ 31 ಗುಂಟೆ ವಿಸ್ತೀರ್ಣ ಇದ್ದು, ದಾವಾ

ಜಮೀನಿನ ಪೂರ್ವಕ್ಕೆ ಇತ್ತು ಎಂದರೆ ಸರಿ . ಸ.ನಂಃ 10 ರಲ್ಲಿ ಅನುಭವದಲ್ಲಿರುವವರೆಗೆ ಸರ್ವೇ ಇಲಾಖೆಯವರು ನೋಟೀಸು ನೀಡಿರುವುದಿಲ್ಲ. ಆದ್ದರಿಂದ ಸದರಿ ಸ್ಕೆಚ್ಚು ಮೋಸದಿಂದ ಆಗಿದೆ ಎಂದರೆ ಸರಿಯಲ್ಲಾ. ನಕ್ಷ್ಷಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ಸದರಿ ನಕ್ಷೆಯನ್ನು ಹಾಜರುಪಡಿಸಿದ ಪಕ್ಷದಲ್ಲಿ ದಾವಾ ಸ್ವತ್ತಿನ ನೈಜತೆ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಈ ಹಂತದಲ್ಲಿ ಮುಂದಿನ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.